Sahitya School

Shidlaghatta Road, Near Shirusti Hospital, H Cross.

# ಟೀಕೆಗಳು ಯಾವಾಗಲೂ ತಪ್ಪೇನಲ್ಲ.



- **ಟೀಕೆ ಒಳ್ಳೆಯದು.** ಮಕ್ಕಳು ಮತ್ತು ವಯಸ್ಕರು ಸಮಾನವಾಗಿ ತಪ್ಪುಗಳನ್ನು ಮಾಡುತ್ತೇವೆ. ಟೀಕೆ ಮಕ್ಕಳಿಗೆ ಸ್ವಯಂ ಎಚ್ಚರಿಕೆಯನ್ನು, ತಪ್ಪುಗಳನ್ನು ಮತ್ತೆ ಮತ್ತೆ ಮಾಡದಿರುವುದನ್ನು ಕಲಿಸುತ್ತದೆ. ಯಾವುದಾದರೂ ಒಂದು ಕೆಲಸವನ್ನು ಹೇಗೆ ಉತ್ತಮಗೊಳಿಸಬೇಕು ಎಂದು ಅವರಿಗೆ ಮನವರಿಕೆ ಮಾಡಿಕೊಡುತ್ತದೆ.

- **ನಿಮ್ಮ ಕಾರ್ಯವನ್ನು ಸಮತೋಲನಗೊಳಿಸಿ.** ಗೆಲ್ಲುವ ಛಲ ಮೂಡಿಸುವಂತಹ ಮತ್ತು ಕ್ರಿಯಾಶೀಲಗೊಳಿಸುವಂತಹ ಟೀಕೆಗಳಿಗೆ ಮೊದಲು ನಾವು ತುಸು ಸಮಾಧಾನ ಚಿತ್ತರಾಗಿರುವುದು ಅವಶ್ಯ.

- **ನಿಮ್ಮ ಮಗುವಿನ ಭಾವನೆಗಳನ್ನು ಗೌರವಿಸಿ.** ಬದಲಾಗಬೇಕಾಗಿರುವುದು ನಿಮ್ಮ ಮಗುವಿನ ನಡವಳಿಕೆಗಳು ಎಂಬುದು ನಿಮ್ಮ ಗಮನದಲ್ಲಿರಲಿ. ಮಗುವನ್ನು ಯಾವಾಗಲೂ ಮೃದುವಾಗಿ, ಪ್ರೀತಿಯಿಂದ ಮಾತನಾಡಿ.

- **ಸ್ಪಷ್ಟ ಸಂದೇಶವನ್ನು ನೀಡಿ.** ಮಕ್ಕಳು ತಮ್ಮ ವರ್ತನೆಗಳನ್ನು ಹೇಗೆ ಸುಧಾರಿಸಿಕೊಳ್ಳಬಹುದು ಎಂಬುದು ನಮಗೆ ತಿಳಿದಿರಬೇಕು. ಅವರ ತಪ್ಪುಗಳನ್ನು ಅವರಿಗೆ ಹೇಳಿದರೆ ಮಾತ್ರ ಸಾಕಾಗುವುದಿಲ್ಲ.

- **ತಪ್ಪು ತಿದ್ದಿಕೊಳ್ಳಲು ಅವಕಾಶ ಕೊಡಿ.** ಒಮ್ಮೆ ತಪ್ಪು ಮಾಡಿದರೆ, ಆ ನಂತರ ನೀವು ಹೇಳಿದ್ದನ್ನೆಲ್ಲಾ ಮಗು ಪಾಲಿಸಲೇಬೇಕು ಎಂಬುದೇನಿಲ್ಲ. ಆಗಿರುವ ತಪ್ಪನ್ನು ತಿದ್ದಿಕೊಳ್ಳಲು ಮಗುವಿಗೇ ಅವಕಾಶ ನೀಡಿ. ತಪ್ಪನ್ನು ಮತ್ತೆ ಮಾಡದಿರುವುದು ಹೇಗೆ ಎಂಬುದರ ಬಗ್ಗೆ ಮಗುವಿನೊಂದಿಗೆ ಮಾತನಾಡಿ.

- **ನಡೆ ಮುಂದೆ.. ನಡೆ ಮುಂದೆ.. ನುಗ್ಗಿ ನಡೆ ಮುಂದೆ.** ತನ್ನ ತಪ್ಪು ಅಥವಾ ಸೋಲನ್ನು ಮುಕ್ತ ಮನಸ್ಸಿನಿಂದ ಒಪ್ಪಿಕೊಂಡು ಮುಂದೆ ಸಾಗಲು ಇದು ಉತ್ತೇಜಿಸುತ್ತದೆ. ಬಹುಶಃ ನಾವು ನಮ್ಮ ಮಕ್ಕಳಿಗೆ ಕಲಿಸಬೇಕಾದ ಅತ್ಯುತ್ತಮ ಪಾಠವೆಂದರೆ ತಪ್ಪನ್ನು ಒಪ್ಪಿಕೊಳ್ಳುವುದು. ಮತ್ತು ಹಾಗೆ ಒಪ್ಪಿಕೊಳ್ಳುವುದರಲ್ಲಿ ಅವಮಾನವೇನಿಲ್ಲ ಎಂಬುದನ್ನು ಅರ್ಥಮಾಡಿಸುವುದು.

Where Fun Meets Learning